International Journal of Kannada Research 2020; 6(3): 147-150




International Journal of Kannada Research
www.kannadajournal.com

**ISSN: 2454–5813**
IJKR 2020; 6(3): 147-150
© 2020 IJKR
www.kannadajournal.com
Received: 16-05-2020
Accepted: 18-06-2020

**ಡಾ.ಶ್ರೀಧರ ಎನ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಅಧ್ಯಯನ
ಮತ್ತು ಸಂಶೋಧನ ವಿಭಾಗ
ಸರಕಾರಿ ಕಾಲೇಜು,
ಕಾಸರಗೋಡು ಅಂಚೆ
ವಿದ್ಯಾನಗರ, ಕಾಸರಗೋಡು ಜಿಲ್ಲೆ
ಕೇರಳ ರಾಜ್ಯ

**Corresponding Author:**
**ಡಾ.ಶ್ರೀಧರ ಎನ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಅಧ್ಯಯನ
ಮತ್ತು ಸಂಶೋಧನ ವಿಭಾಗ
ಸರಕಾರಿ ಕಾಲೇಜು,
ಕಾಸರಗೋಡು ಅಂಚೆ
ವಿದ್ಯಾನಗರ, ಕಾಸರಗೋಡು ಜಿಲ್ಲೆ
ಕೇರಳ ರಾಜ್ಯ

# ಗೋವಿಂದ ಪೈ ಕವಿತೆಗಳಲ್ಲಿ ರಾಷ್ಟ್ರೀಯತೆ

**ಡಾ.ಶ್ರೀಧರ ಎನ್**

ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯದ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ಕೃಷಿಯನ್ನು ನಡೆಸಿದ ಪ್ರಮುಖ ಕವಿಗಳಲ್ಲಿ ದಿ.ಗೋವಿಂದ ಪೈಗಳು ಒಬ್ಬರು. ಅಪಾರವಾದ ವಿದ್ವತ್ತು ಮತ್ತು ಅಸಾಧಾರಣ ಪಾಂಡಿತ್ಯವನ್ನು ಪಡೆದ ಪೈಗಳ ಕಾವ್ಯ ಸಾಧನೆ ಆಳವೂ ವಿಸ್ತಾರವೂ ಆಗಿದೆ. ಕನ್ನಡದಲ್ಲಿ ಮೊತ್ತ ಮೊದಲ ಸಾನೆಟ್ ಬರೆದ, ಖಂಡಕಾವ್ಯ, ಪ್ರಗಾಥಗಳನ್ನು ಕನ್ನಡಕ್ಕೆ ಪರಿಚಯಿಸಿದ, ಕನ್ನಡ ಕಾವ್ಯರಚನೆಯಲ್ಲಿ ಪ್ರಾಸತ್ಯಾಗದ ಧೀರನಿರ್ಧಾರವನ್ನು ಕೈಗೊಂಡ ಪೈಗಳು ಕ್ರಾಂತಿಕಾರಿ ಕವಿಗಳೆನಿಸಿದ್ದಾರೆ. ಇವರು ಬರೆದ ಗಿಳಿವಿಂಡು, ನಂದಾದೀಪ, ಹೃದಯರಂಗ, ಗೊಲ್ಗೊಥಾ, ವೈಶಾಖಿ, ಹೆಬ್ಬೆರಳು ಮೊದಲಾದ ಕೃತಿಗಳು ಚಿರಂತನ ಕೃತಿಗಳಾಗಿ ಕನ್ನಡ ಸಾಹಿತ್ಯಾಕಾಶದಲ್ಲಿ ಇಂದಿಗೂ ಪ್ರಜ್ವಲಿಸುತ್ತಿವೆ.

ಇಪ್ಪತ್ತನೆಯ ಶತಮಾನವು ಭಾರತದಲ್ಲಿ ಬದಲಾವಣೆಯ ಕಾಲ. ಭಾರತದಲ್ಲಿ ಗಾಂಧಿಯುಗವು ಆರಂಭಗೊಂಡು ಸ್ವಾತಂತ್ರ್ಯದ ಪ್ರಜ್ಞೆಯು ಜನರ ನರನಾಡಿಗಳಲ್ಲಿ ಹರಿದಾಡಿತು. ಈ ಕಾಲದಲ್ಲಿ ವಸಾಹತುಶಾಹಿ ಸಂಸ್ಕೃತಿಗೆ ಪ್ರತಿಭಟನೆಯಾಗಿ ಸಾಹಿತ್ಯದ ಮೂಲಕ ಒಂದು ಹೊಸ ಪ್ರಕ್ರಿಯೆ ರೂಪುಗೊಂಡಿತು. ಬ್ರಿಟಿಷರ ಆಡಳಿತದ ವಿರುದ್ಧ ಈ ರೀತಿಯ ಪ್ರತಿಕ್ರಿಯೆ ಸಾಹಿತ್ಯದಲ್ಲಿ ಮೂಡಿ ಬಂದಿತೆನ್ನುವುದು ಮುಖ್ಯ ಸಂಗತಿಯಾಗಿದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೂ ಈ ರೀತಿಯ ರಾಷ್ಟ್ರೀಯ ಪ್ರಜ್ಞೆಯು ಮೂಡಿಬಂತು. ರಾಷ್ಟ್ರೀಯತೆ ಎಂದರೆ ರಾಷ್ಟ್ರದ ಬಗೆಗಿನ ಎಚ್ಚರ, ಸ್ವಾತಂತ್ರ್ಯದ ಹಂಬಲ, ಕಳೆದು ಹೋಗುತ್ತಿರುವ ಸಂಸ್ಕೃತಿ, ಪರಂಪರೆಗಳ ಬಗೆಗಿನ ಕಾಳಜಿ, ನಾಡುನುಡಿಗಳ ಕುರಿತಾದ ಪ್ರೇಮ ಇತ್ಯಾದಿ ಅಂಶಗಳನ್ನು ಒಳಗೊಂಡಿದೆ. ರಾಷ್ಟ್ರೀಯತೆಯ ಪ್ರಜ್ಞೆಯ ಮೂಲಕ ನಮ್ಮ ಇತಿಹಾಸವನ್ನು ಹಾಡಿ ಹೊಗಳುವ, ನೆನಪಿಸುವ ಪ್ರಕ್ರಿಯೆ ಆರಂಭವಾಯಿತು.

ರಾಷ್ಟ್ರೀಯತೆಯ ಪ್ರಜ್ಞೆಯು ಕನ್ನಡ ಕವಿಗಳಲ್ಲಿ ಎರಡು ರೀತಿಗಳಲ್ಲಿ ಅಭಿವ್ಯಕ್ತವಾಗಿವೆ. ಒಂದು, ವಿಶಾಲ ಭಾರತದ ಪರಿಕಲ್ಪನೆ. 'ಭಾರತವನುಳಿಯುತ್ತ ನನಗೆ ಜೀವನವೆತ್ತ?' ಎಂಬ ನಿಲುವು. ಎರಡು, ಕನ್ನಡ ಮತ್ತು ಕರ್ನಾಟಕದ ಪರಿಕಲ್ಪನೆ. 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ' ಎಂಬ ಮನೋಧರ್ಮ. ದಕ್ಷಿಣ ಕನ್ನಡ ಜಿಲ್ಲೆಯ ಕವಿಗಳು ಇವೆರಡು ಪರಿಕಲ್ಪನೆಗಳ ಜತೆಗೆ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗಳ ಕುರಿತು ಕವನಗಳನ್ನು ಬರೆದಿರುವುದು ಉಲ್ಲೇಖನೀಯ ಸಂಗತಿಯಾಗಿದೆ. ಪಂಜೆಯವರ 'ಹುತ್ತರಿ ಹಾಡು' ಮತ್ತು ಪೈಗಳ 'ತೌಳವಮಾತೆ' ಕವನಗಳು ಇದಕ್ಕೆ ಉದಾಹರಣೆಗಳು. ಕರ್ನಾಟಕದ ಮೈಸೂರು ಪ್ರಾಂತದಲ್ಲಿ ಬಿಎಂಶ್ರೀ, ಕುವೆಂಪು ಮೊದಲಾದವರು, ಧಾರವಾಡ ಪ್ರದೇಶದಲ್ಲಿ ಶಾಂತಕವಿ, ಬೇಂದ್ರೆ ಮೊದಲಾದವರು ತಮ್ಮ ಕವಿತೆಗಳಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಜೆ ಮಂಗೇಶರಾಯರು, ಮಂಜೇಶ್ವರ ಗೋವಿಂದ ಪೈಗಳು, ಕಡೆಂಗೋಡ್ಲು ಶಂಕರಭಟ್ಟರು ತಮ್ಮ ಕವಿತೆಗಳಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಮೆರೆದರು. ಗೋವಿಂದ ಪೈಗಳ ರಾಷ್ಟ್ರೀಯ ಪ್ರಜ್ಞೆಯ ಕವನಗಳಲ್ಲಿ ಪುರಾಣ, ಇತಿಹಾಸಗಳ ಕಥೆಗಳು ಇಡಿಕಿರಿದಿವೆ. ಅವರ ಇಂತಹ ಕವನಗಳನ್ನು ಅರಗಿಸಿಕೊಳ್ಳಬೇಕಾದರೆ ಪುರಾಣ, ಇತಿಹಾಸಗಳ ಪ್ರವೇಶ ಅಗತ್ಯ.

'ಭಾರತಾಂಬೆಯ ಮಹಿಮೆ' ಗೋವಿಂದ ಪೈಗಳು ಬರೆದ ಉಜ್ವಲ ರಾಷ್ಟ್ರಾಭಿಮಾನದ ಕವನ. 'ಭಾರತವನುಳಿಯುತ್ತ ನನಗೆ ಜೀವನವೆತ್ತ?' ಎಂದು ಪ್ರಶ್ನಿಸುವ ಕವಿ ಭಾರತದ ಪುಣ್ಯಭೂಮಿಯಲ್ಲಿ ಹುಟ್ಟಿರುವುದಕ್ಕಾಗಿ ಹೆಮ್ಮೆಪಡುತ್ತಾರೆ; ಅದನ್ನು ನೆನಪಿಸಿಕೊಳ್ಳುತ್ತ ಧನ್ಯತೆಯನ್ನು ಅನುಭವಿಸುತ್ತಾರೆ. ಭಾರತವು ನನ್ನ ದೇಶ. ನನಗೆ ಜನ್ಮವನ್ನು ನೀಡಿದ ಭೂಮಿ. ಅದು ನನ್ನನ್ನು ಹೊತ್ತ ಬಸಿರು. ಅದುವೇ ನನ್ನ ಪ್ರಾಣ. ನನ್ನ ಬದುಕಿಗೆ ಆಶ್ರಯವಾದ ಧನಧಾನ್ಯ, ಮನೆಮಠ, ಸಂಸಾರ,

ದೇವಾಲಯ ಎಲ್ಲವೂ ಈ ನೆಲ ಎಂದು ಅಭಿಮಾನದಿಂದ ಕವಿ ನಿವೇದಿಸಿಕೊಳ್ಳುತ್ತಾರೆ. ಭಾರತದ ನೆಲ ಹೊಲ ಎಲ್ಲವೂ ಸಮೃದ್ಧಿಯಿಂದ ಕೂಡಿದೆ. ಸುರಭಿಯ ಕೆಚ್ಚಲಿನಂತೆ ಪರಿಪೂರ್ಣವಾಗಿದೆ. ಈ ನೆಲದ ತಿಳಿಯಾದ ನೀರಿಗೆ ಅಮೃತದ ಸವಿಯಿದೆ. ಈ ದೇಶದ ಹಸಿರು ಸಂಪತ್ತು, ಪಕ್ಷಿಮೃಗಾದಿ ವೈವಿಧ್ಯಗಳು ತನುಮನಗಳಿಗೆ ಮುದನೀಡುತ್ತವೆ. ಭಾರತದ ಶ್ರೇಷ್ಠವಾದ ಸಂಸ್ಕೃತ ಭಾಷೆಯು ಜ್ಞಾನದ ಆಗರವಾಗಿದೆ. ಈ ಮಣ್ಣಿನಲ್ಲಿ ಬಹುಭಾಷೆ, ಸಂಸ್ಕೃತಿಗಳಿದ್ದರೂ ಐಕ್ಯ ಸಾಧ್ಯವಾಗಿದೆ. ಈ ದೇಶದ ಪುಣ್ಯ ಚರಿತೆಗಳು ಜಗತ್ತಿಗೆ ಧರ್ಮದ ಸಾರವನ್ನು ನೀಡಿವೆ. ಈ ನೆಲದ ಶೌರ್ಯ ಸಾಹಸದ ಕತೆಗಳು ಶತ್ರುಗಳ ಎದೆಯಲ್ಲಿಯೂ ದಿಗಿಲು ಹುಟ್ಟಿಸುತ್ತವೆ ಎಂದು ಕವಿಗಳು ತಮ್ಮ ದೇಶದ ಔನ್ನತ್ಯವನ್ನು ಸಾರುತ್ತಾರೆ.

ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಬದುಕಿನ ಮಂತ್ರ. ಸ್ವತಂತ್ರ ಭಾರತದ ಜಯಮೂರ್ತಿಯ ರೂಪವು ನನ್ನ ಮನಸ್ಸನ್ನು ಆವರಿಸಿಕೊಂಡಿದೆ. ಭಾರತದ ಸಹೋದರತೆಯು ನನ್ನ ಅನುದಿನದ ಪ್ರಾರ್ಥನೆ. ಭಾರತದ ಯಶೋಗೀತೆಯೇ ನನ್ನ ಹೃದಯದ ತುಡಿತ. ಭಾರತವು ಜಗತ್ತಿನ ಶಾಂತಿಗೆ ಆಶ್ರಯ ತಾಣ. ಹೀಗಾಗಿ ಭಾರತದ ಹಿತವೇ ದೇವರ ಒಲವು. ಭಾರತದ ಜನರು ಜಗತ್ತಿಗೆ ಶಕ್ತಿ ತುಂಬಬಲ್ಲವರು. ಆದುದರಿಂದ 'ಭಾರತಾಂಬೆಯ ಭಕ್ತಿ ನನಗಾತ್ಮಶಕ್ತಿ' ಎಂದು ಅವರು ಭಾರತ ಮಾತೆಯನ್ನು ಹಾಡಿ ಹೊಗಳುತ್ತಾರೆ.

'ಭಾರತ ಭಾಗ್ಯ ವಿಧಾತಾ' ಎಂಬ ಕವಿತೆ ಹಾಡಿನ ರೂಪದಲ್ಲಿದ್ದು, ರಾಷ್ಟ್ರೀಯತೆಯೇ ಅದರ ಜೀವಾಳವಾಗಿದೆ. 'ಭಾರತ ಭಾಗ್ಯ ವಿಧಾತಾ ತಾತಾತಾ ಸ್ವರಾಜ್ಯವೆಮಗೆ ದಾತಾ ತಾತಾತಾ' ಎಂದು ಆರಂಭಗೊಳ್ಳುವ ಕವಿತೆಯು ಸ್ವರಾಜ್ಯವನ್ನು ಕರುಣಿಸಿ ಶಾಂತಿಯ ಸೇಸೆಯನ್ನು ಸುರಿಸುವಂತೆ ಕವಿ ದೇವರಲ್ಲಿ ಪ್ರಾರ್ಥಿವುದರೊಂದಿಗೆ ಕೊನೆಯಾಗುತ್ತದೆ. 'ಭಾರತದ ಸ್ವಾತಂತ್ರ್ಯ ಗಾಯತ್ರಿ' ಎಂಬ ಕವಿತೆಯು ಕ್ವಿಟ್ ಇಂಡಿಯಾ ಸಮರ ಕಾಲದಲ್ಲಿ ರಚಿತವಾಗಿದೆ. 'ಇನ್ನೆವರಂ ಆಳ್ದಿರಲ್ಲ ಭಾರತವ? ನೆಮ್ಮದಿಯಿನಿನ್ನ ಹೊರವಡಿರಿ ಬಿಳಿಯ ಬಾಂಧವರೇ! ಮರೆವೆವು ತಪ್ಪನೆಲ್ಲ, ಇನ್ನಿಲ್ಲ ನಿಮಗಿಲ್ಲಿ ಕೆಲಸವಿದೊ ನಡಿರಿ' ಎಂದು ಅವರು ಬ್ರಿಟಿಷರಿಗೆ ಎಚ್ಚರಿಕೆಯನ್ನು ಕೊಡುತ್ತಾರೆ. ಕ್ವಿಟ್ ಇಂಡಿಯಾ ಸಮರಕ್ಕೆ ಕರೆ ಕೊಟ್ಟ ಗಾಂಧೀಜಿಯವರ ನಡೆಯನ್ನು ಬುದ್ಧನ ಧರ್ಮಚಕ್ರ ಪ್ರವರ್ತನಕ್ಕೆ ಹೋಲಿಸಿಕೊಳ್ಳುವ ಕವಿ 'ಕ್ವಿಟ್ ಇಂಡಿಯಾ ಎಂದು ಗಾಂಧಿ ನೀ ಬರೆದೆ, ಭಾರತದ ಹೃದಯದಲಿ ಮಿಂಚಿನಕ್ಷರದೆ' ಎಂದು ಅಭಿಮಾನಪಟ್ಟುಕೊಳ್ಳುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಅನಂತರ ಬರೆದ 'ಜಯಹಿಂದ ಗೀತ'ವು ಉತ್ಸಾಹದ ಚಿಲುಮೆಯಂತಿರುವ ಒಂದು ಒಳ್ಳೆಯ ಭಾವಗೀತೆ. 'ಇನ್ನು ಹೆರವರ ನೊಗಕೆ ಮಣಿವರಾವಲ್ಲ! ಜಗದಿ ತಲೆಯೆತ್ತಿ ಹೆಬ್ಬಾಳಲೆದ್ದಿಹೆವು, ಕಳಕೊಂಡ ಬಿಡುಗಡೆಯ ಮರಳಿ ಗೆದ್ದಿಹೆವು, ನಡೆಮುಂದೆ, ಹಿಂದವಿನ್ನಡಿಮೆಯನ್ನೊಲ್ಲ!' ಎಂಬ ಸಾಲುಗಳು ಸ್ವಾತಂತ್ರ್ಯ ಸಿಕ್ಕಿದ ಸಂತೋಷವನ್ನೂ, ಅದನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನೂ ಅಭಿವ್ಯಕ್ತಗೊಳಿಸುತ್ತದೆ.

ದಶರಥನು ಕೈಕೇಯಿಗೆ ಎರಡು ವರಗಳನ್ನು ಕೊಟ್ಟ ಹಾಗೆ ಭಾರತದಲ್ಲಿ ಹುಟ್ಟುವ ಪ್ರತಿಯೊಬ್ಬ ವ್ಯಕ್ತಿಯೂ ಎರಡು ಪರಮ ಶಕ್ತಿಗಳನ್ನು ಹೊಂದಿರುತ್ತಾನೆ. ಈ ಎರಡು ಪರಮ ಶಕ್ತಿಗಳನ್ನು ಬಳಸಿಕೊಂಡು ದೇಶವನ್ನೂ ಧರ್ಮವನ್ನೂ ಕಾಯಬೇಕಾದ ಹೊಣೆಗಾರಿಕೆ ಭಾರತೀಯ ಪ್ರಜೆಗೆ ಇದೆ. ಹಾಗಾದರೆ ಮಾತ್ರ ನಮ್ಮ ದೇಶ, ಧರ್ಮಗಳನ್ನು ಪರರ ಸೊತ್ತಾಗದಂತೆ ತಡೆಗಟ್ಟಬಹುದು ಎಂಬ ಆಶಯವನ್ನು 'ಎರಡು ವರ' ಎಂಬ ಕವಿತೆಯಲ್ಲಿ ಗೋವಿಂದ ಪೈಗಳು ಪ್ರತಿಪಾದಿಸುತ್ತಾರೆ. ಗಯಾ ಕ್ಷೇತ್ರದಲ್ಲಿ ಬೋಧಿಜ್ಞಾನವನ್ನು ಹೊಂದಿದ ಗೌತಮ ಬುದ್ಧನು ಅಲ್ಲಿಂದ ಕಾಶಿಗೆ ತೆರಳಿ ಸಾರನಾಥ ಎಂಬ ಪಟ್ಟಣದಲ್ಲಿ ಮಾಡಿದ ಧರ್ಮೋಪದೇಶವು ಧರ್ಮಚಕ್ರ ಪ್ರವರ್ತನ ಎಂದು ಪ್ರಸಿದ್ಧವಾಗಿದೆ. ಅಲ್ಲಿಂದ ಮುನ್ನೂರು ವರ್ಷಗಳ ಬಳಿಕ ಮೌರ್ಯ ಸಾಮ್ರಾಟನಾದ ಅಶೋಕನು ಅದೇ ಸ್ಥಳದಲ್ಲಿ ಸ್ತೂಪವನ್ನು ನಿರ್ಮಿಸಿ, ಅದರ ಸ್ತಂಭದಲ್ಲಿ ಬುದ್ಧೋಪದೇಶದ ಪ್ರತೀಕವಾಗಿ ಚಕ್ರವನ್ನು ಕೆತ್ತಿಸಿದನು. ಈ ಪುಣ್ಯ ಧರ್ಮಚಕ್ರವೇ ಇಂದು ನಮ್ಮ ರಾಷ್ಟ್ರಧ್ವಜದಲ್ಲಿ ಮೆರೆಯುತ್ತಿದೆ. ಈ ಪವಿತ್ರ ಧ್ವಜವು ಜಗತ್ತಿನಲ್ಲಿ ಸದಾಕಾಲ ಮುಂಚೂಣಿಯಲ್ಲಿರಲಿ, ನಮ್ಮ ಸ್ವಾತಂತ್ರ್ಯ ಅಚಂದ್ರಾರ್ಕ ಬಾಳಲಿ ಎಂದು 'ಭಾರತಧ್ವಜ' ಎಂಬ ಕವಿತೆಯು ಸಾರುತ್ತದೆ.

ಗೋವಿಂದ ಪೈಗಳಿಗೆ ಮಹಾತ್ಮ ಗಾಂಧಿಯವರ ಕುರಿತು ಅಪಾರವಾದ ಗೌರವ, ಅಭಿಮಾನ. ಗಾಂಧಿಯನ್ನು ಕುರಿತೇ ಅವರು ಏಳು ಸಾನೆಟುಗಳನ್ನು ರಚಿಸಿದ್ದಾರೆ. ಮಹಾವ್ರತ, ನಿ:ಸ್ವ, ಸಮುದ್ರಮಥನ ಎಂಬಿವು ಗಾಂಧಿಹತ್ಯೆಯ ಮೊದಲು ಬರೆದ ಕವಿತೆಗಳು. ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು, ಮಹಾತ್ಮನ ಆತ್ಮಕ್ಕೆ, ವರುಷ ಒಂದಾಯ್ತು, ಸತ್ತು ಗಡ ಬದುಕಿದಿ ಮಹಾತ್ಮ ನೀ ಧನ್ಯ ಎಂಬ ಕವಿತೆಗಳು ಗಾಂಧೀಹತ್ಯೆಯ ಅನಂತರ ಬರೆದವು. ಮಹಾತ್ಮನ ಕೊನೆಯ ದಿನ ಅಥವಾ ದೇಹಲಿ ಎಂಬ ಖಂಡಕಾವ್ಯವು ಅಪೂರ್ಣವಾಗಿದ್ದರೂ, ಅದು ಗಾಂಧೀಜಿಯವರ ಸಾವಿನ ಸನ್ನಿವೇಶವನ್ನು ಹೊಂದಿದೆ. ಗಾಂಧೀಜಿಯವರು ತೀರಿಕೊಂಡ ನಂತರದ ದುರಂತವನ್ನು ಹೇಳುವ 'ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು' ರಾಷ್ಟ್ರೀಯ ಪ್ರಜ್ಞೆಯನ್ನು ಪ್ರಕಟಿಸುವ ಒಂದು ಉತ್ತಮ ರಚನೆ. 'ಈಗ ಭಾರತಕತ್ಯಗತ್ಯವಿದೆ ನಿನ್ನ, ಬಿರುಗಾಳಿಗೊಲೆವ ಹಡಗಂತಿಹುದದಾಸತ್ತು, ನಿನ್ನ ಹೊರತಾರೊಯ್ಯ ರೇವಿನೊಳದನ್ನ?' ಎಂದು ಪ್ರಶ್ನಿಸುವ ಕವಿ ಭಾರತವೆಂಬ ಹಡಗು ಯಶಸ್ವಿಯಾಗಿ ಸಾಗಬೇಕಾದರೆ ಗಾಂಧಿ ಮತ್ತೆ ಹುಟ್ಟಿ ಬರಬೇಕೆಂದು ಆಶಿಸುತ್ತಾರೆ.

ರಾಷ್ಟ್ರೀಯ ಪ್ರಜ್ಞೆಯ ಒಂದು ಮುಖ ದೇಶಭಕ್ತಿಯಾದರೆ, ಇನ್ನೊಂದು ಮುಖ ನಾಡುನುಡಿಗಳ ಬಗೆಗಿನ ಪ್ರೇಮ. ಕರ್ನಾಟಕ ಮತ್ತು ಕನ್ನಡ ನುಡಿಯ ಹಿರಿಮೆಯನ್ನು ಸಾರುವ, ಕನ್ನಡ ಸಂಸ್ಕೃತಿಯನ್ನು ಹಾಡಿ ಹೊಗಳುವ ಕವನಗಳನ್ನು ಅನೇಕ ಕವಿಗಳು ಬರೆದಿದ್ದಾರೆ. ಗೋವಿಂದ ಪೈಗಳ 'ಕನ್ನಡಿಗರ ತಾಯಿ' ಇಂತಹ ಒಂದು ಜನಪ್ರಿಯ ಕವನ. 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ, ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ' ಎಂಬ ಪ್ರಾರ್ಥನೆಯೊಂದಿಗೆ ಆರಂಭಗೊಳ್ಳುವ ಕವನವು ಕನ್ನಡನಾಡಿನ ಇತಿಹಾಸ, ಪರಂಪರೆ, ಸಂಸ್ಕೃತಿಗಳನ್ನು ವರ್ಣಿಸುತ್ತ ಕನ್ನಡದ ವೈಭವವನ್ನು ನಿರೂಪಿಸುತ್ತದೆ. ಜನ್ಮಭೂಮಿಯನ್ನು ತಾಯಿ ಎಂದು ಕರೆದು ಗೌರವಿಸುವುದು ನಮ್ಮ ನಾಡಿನ ಸಂಸ್ಕೃತಿ. ಹೀಗಾಗಿ ಕವಿ ಕನ್ನಡಿಗರ ತಾಯಿಯನ್ನು ಜನ್ಮದಾತೆ ಎಂದು ಕರೆದು ಗೌರವಿಸಿದ್ದಾರೆ. ಈ ಕನ್ನಡಿಗರ ತಾಯಿ ತನ್ನ ಮಕ್ಕಳ ಎಷ್ಟೋ ತಪ್ಪುಗಳನ್ನು ಮನ್ನಿಸುವವಳು. ಪ್ರೀತಿಯಿಂದ ಮಕ್ಕಳನ್ನು ಪೊರೆಯುವವಳು. ಹೀಗಾಗಿ ಕವಿ ಕನ್ನಡಮಾತೆಯನ್ನು ಕುರಿತು 'ನೀನೆ ಕಣಾ ನಮ್ಮ ಬಾಳ್ವೆ, ನಿನ್ನ ಮರೆಯಲಮ್ಮೆವು– ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು' ಎಂದು ಹೇಳುತ್ತ ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಾರೆ.

ಕನ್ನಡನಾಡಿನ ಪ್ರಕೃತಿಯನ್ನು ಕವಿ ತನ್ಮಯತೆಯಿಂದ ವರ್ಣಿಸಿದ್ದಾರೆ. ಕನ್ನಡನಾಡು ಪ್ರಾಕೃತಿಕ ಸೌಂದರ್ಯದಿಂದ, ಫಲಪುಷ್ಪಗಳಿಂದ ಕೂಡಿ ಸಮೃದ್ಧವಾಗಿದೆ. ಹಣ್ಣುಕಾಯಿಗಳನ್ನು ಧಾರಾಳವಾಗಿ ನೀಡುವ ಬಗೆಬಗೆಯ ವೃಕ್ಷಗಳಿವೆ.

ಪತ್ರಪುಷ್ಪಗಳನ್ನು ಒದಗಿಸುವ ಹಲವು ತರದ ಗಿಡಮರಬಳ್ಳಿಗಳಿವೆ. ಬೆಟ್ಟದ ಕಡೆಯಿಂದ ಬೀಸುವ ತಂಪಾದ ಗಾಳಿಯಿದೆ. ಬಗೆಬಗೆಯ ಮೃಗಪಕ್ಷಿಗಳ ಕಲರವಗಳಿವೆ. ನದಿನಗರನಗ ಸಮೂಹಗಳಿವೆ. ಇಲ್ಲಿ ಇಲ್ಲದಿರುವುದು ಏನಾದರೂ ಇದೆಯೇ ಎಂದು ಪ್ರಶ್ನಿಸುವ ಕವಿ 'ಜೇನು ಸುರಿವ, ಹಾಲು ಹರಿವ ದಿವಂ ಭೂಮಿಗಿಳಿದುದೆ?' ಎಂದು ಹಿಗ್ಗುತ್ತಾರೆ.

ಕನ್ನಡನಾಡಿನ ಇತಿಹಾಸವನ್ನು ಪುರಾಣ ಕಾವ್ಯಗಳೊಂದಿಗೆ ಬೆಸೆಯುವ ಕವಿಗಳು ಕರ್ನಾಟಕದ ಚರಿತ್ರೆಗೆ ಬೇರೊಂದು ನೆಲೆಯನ್ನು ಕಲ್ಪಿಸಿದ್ದಾರೆ. ಶ್ರೀರಾಮಚಂದ್ರನನ್ನು ಕಾಣುವುದಕ್ಕಾಗಿ ತಪಸ್ಸು ಮಾಡುತ್ತಿದ್ದ ಶಬರಿಯು ಅವನಿಗೆ ಹಣ್ಣಹಂಪಲುಗಳನ್ನು ಕೊಟ್ಟು ಸತ್ಕರಿಸಿ ಮೋಕ್ಷವನ್ನು ಪಡೆದ ನೆಲವಿದು, ದುಷ್ಟನಾದ ರಾವಣನನ್ನು ಸಂಹರಿಸುವುದಕ್ಕಾಗಿ ಶ್ರೀರಾಮಚಂದ್ರನು ಹನುಮಂತ ಸುಗ್ರೀವಾದಿಗಳ ಸಖ್ಯವನ್ನು ಮಾಡಿಕೊಂಡು ಕಪಿಸೈನ್ಯವನ್ನು ಕೂಡಿಸಿದ ಸ್ಥಳವಿದು, ಪಾಂಡವರು ಅಜ್ಞಾತವಾಸವನ್ನು ಮಾಡಿದ ಪ್ರದೇಶವಿದು, ಭೀಮನು ಕೀಚಕನನ್ನು ಕೊಂದ ಸ್ಥಳವಿದು, ವಿರಾಟನ ಗೋಗ್ರಹಣದ ಮೂಲಕ ಮಹಾಭಾರತ ಯುದ್ಧ ಅರಂಭಗೊಂಡ ನೆಲವಿದು, ಶ್ರೀಕೃಷ್ಣನು ಸಂಧಾನಕ್ಕೆ ತೆರಳಿದ ಪುಣ್ಯ ಭೂಮಿ ಇದು ಎಂದು ಕನ್ನಡನಾಡಿನ ಚರಿತ್ರೆಯನ್ನು ಅಭಿಜಾತ ಕಾವ್ಯಗಳಲ್ಲಿ ಹುಡುಕಿದ್ದಾರೆ.

ಶಕರೆಂಬ ವಿದೇಶಿಯರನ್ನು ಸದೆಬಡಿದು ಹೊರಗಟ್ಟಿ ಕ್ರಿ.ಶ.೭೮ರಲ್ಲಿ ಶಕವರ್ಷವನ್ನು ಆರಂಭಿಸಿದ ಶಾತವಾಹನ, ಅನಂತರದ ಕಾಲದಲ್ಲಿ ಚಾಲುಕ್ಯ, ರಾಷ್ಟ್ರಕೂಟ, ಗಂಗ, ಕದಂಬ, ಹೊಯ್ಸಳ, ಕಲಚುರ್ಯ, ವಿಜಯನಗರ ಅರಸರು ಈ ನೆಲವನ್ನು ಆಳಿದರು. ಜೈನಯತಿಗಳಾದ ಪೂಜ್ಯಪಾದ, ಕೊಂಡಕುಂದಾಚಾರ್ಯರು, ಮತ ಸ್ಥಾಪಕರಾದ ಮಧ್ವಾಚಾರ್ಯ, ಬಸವಣ್ಣಾದಿಗಳು ಹುಟ್ಟಿದ ನೆಲವಿದು. ನೃಪತುಂಗ, ಪಂಪ, ರನ್ನ, ಲಕ್ಷ್ಮೀಶ, ಜನ್ನ, ಷಡಕ್ಷರ, ಮುದ್ದಣ, ಪುರಂದರ ದಾಸಾದಿಗಳನ್ನು ಹಡೆದ ತಾಯಿ ನೀನು. ವಿದ್ಯಾರಣ್ಯರಂತಹ ಚಿನ್ನದ ಗನಿಗೆ ಜನ್ಮ ನೀಡಿದ ನಿನ್ನ ಬಸಿರು ಶ್ರೇಷ್ಠ ಎಂದು ಕನ್ನಡಿಗರ ಮಾತೆಯನ್ನು ಕವಿ ಸ್ತುತಿಸಿದ್ದಾರೆ. ಬೇಲೂರು, ಹಳೆಬೀಡುಗಳ ಶಿಲ್ಪಕಲೆಯನ್ನು ವರ್ಣಿಸಲು ಅಸದಳ. ಶ್ರವಣಬೆಳಗೊಳ, ಕಾರ್ಕಳದ ಗೊಮ್ಮಟ ಮೂರ್ತಿಗಳ ಭವ್ಯತೆಗೆ ಸಾಟಿಯಿಲ್ಲ. ಇಲ್ಲಿಲ್ಲದ ಶಿಲ್ಪಗಳು ಬೇರೆಲ್ಲೂ ಇಲ್ಲ. ಇಲ್ಲಿನ ಕಲ್ಲುಗಳೇ ಕತೆಗಳನ್ನು ಹೇಳುತ್ತವೆ. ನಿನ್ನ ಇತಿಹಾಸದ ಸವಿಗತೆಗಳನ್ನು ನಮಗೆ ಉಣಿಸು. 'ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು' ಎಂದು ಕವಿ ಪುಳಕಗೊಳ್ಳುತ್ತಾರೆ.

ತನ್ನ ನಾಭಿಯಲ್ಲಿರುವ ಸುಗಂಧವನ್ನು ಅರಿಯದೆ ಹೊರಗೆ ಹುಡುಕುವ ಕಸ್ತೂರಿ ಮೃಗದಂತೆ ನಮ್ಮ ಪರಿಸ್ಥಿತಿ ಇದೆ. ಅನ್ಯಭಾಷೆಗೆ ಮಾರು ಹೋಗುವ ನಾವು ಕನ್ನಡದ ಸವಿಯನ್ನು, ಸತ್ವವನ್ನು ತಿಳಿಯಬೇಕು. ಕನ್ನಡದ ಕಸ್ತೂರಿಯನ್ನು ಹೊಸ ಉತ್ಸಾಹದಲ್ಲಿ ತೀಡದಿದ್ದರೆ ಸುರಭಿಯ ಪರಿಮಳ ದಕ್ಕುವುದೇ? ನೀನು ನವಶಕ್ತಿಯನ್ನು ನೀಡಿ ಹೊಸ ಸುಗಂಧವನ್ನು ಹಚ್ಚಿ ಜಗತ್ತಿಗೆ ಕನ್ನಡದ ಕೀರ್ತಿಯನ್ನು ಹಬ್ಬಿಸು ಎಂದು ವಿನಂತಿಸುತ್ತಾರೆ. ತಾಳಿಕೋಟೆಯ ಯುದ್ಧವು ಭಾರತದ ಬಹುದೊಡ್ಡ ಸಾಮ್ರಾಜ್ಯ ವಿಜಯನಗರದ ಪತನಕ್ಕೆ ಕಾರಣವಾಯಿತು. ಆದರೆ ಆ ಯುದ್ಧವು ನಿನ್ನ ವೀರಯೋಧರ ಸಾಹಸದ ಕೊನೆಯ ಮಾತಲ್ಲ. ಕಡಲಿನ ಒರತೆಗೆ ಕೊರತೆಯುಂಟೆ? ಹಾಗೆಯೇ ನಿನ್ನ ಸ್ಫೂರ್ತಿಯ ಸೆಲೆಯೂ ಬತ್ತದು. ಸೋಲು ಗೆಲುವು ಜಗತ್ತಿನ ನಿಯಮ. ನೀನು ಸೋತರೂ ಗೆದ್ದವಳು. ಸಾವಿರ ತಾಳಿಕೋಟೆ ಯುದ್ಧಗಳು ನಡೆದರೂ ನಿನಗೆ ಅಳಿವಿಲ್ಲ. ದೇಹಬಲ ಮತ್ತು ಮನೋಬಲದಿಂದ ಗೆಲ್ಲುವೆವು. ನಿನ್ನ ಹೆಸರಿಗೆ ಕಳಂಕವಾಗದಂತೆ, ನಿನ್ನ ಕೀರ್ತಿ ಪತಾಕೆಯು ಶಾಶ್ವತವಾಗಿ ಹಾರುವಂತೆ, ನಿನ್ನ ಮಾತು ನಿರಂತರವಾಗಿ ಉಳಿಯುವಂತೆ ಎಲ್ಲರ ಬಾಯಲ್ಲಿ ನೆಲಸು. ಎಲ್ಲರ ಮನಸ್ಸನ್ನು ಒಂದುಗೂಡಿಸು. ಎಂದು ಪ್ರಾರ್ಥಿಸುವ ಕವಿ 'ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ?' ಎಂದು ಉತ್ಸುಕರಾಗಿ ಪ್ರಶ್ನಿಸುತ್ತಾರೆ.

ಗೋವಿಂದ ಪೈಯವರ 'ತೌಳವಮಾತೆ' ಕವನವು ತುಳುನಾಡಿನ ವೈಭವವನ್ನು ವರ್ಣಿಸುತ್ತದೆ. 'ಜಯಜಯ ತೌಳವ ಮಾತೆ' ಎಂದು ಸ್ತುತಿರೂಪದಲ್ಲಿ ಆರಂಭವಾಗುವ ಕವನವು ತೌಳವ ಸಂಸ್ಕೃತಿಯ ಮುಖ್ಯವಾದ ಅಂಶಗಳನ್ನು ಅನಾವರಣಗೊಳಿಸುತ್ತದೆ. ತುಳುನಾಡು ಕರ್ನಾಟಕದ ಅವಿಭಾಜ್ಯ ಅಂಗ ಎಂದು ಸಾರುವ ಕವಿಗಳು ಪ್ರಾದೇಶಿಕ ಸಂಸ್ಕೃತಿಯ ವೈಭವವನ್ನು ಸಾರುತ್ತ ರಾಷ್ಟ್ರೀಯತೆಯ ಭಾವವನ್ನು ಪ್ರಚೋದಿಸಿದ್ದಾರೆ. ಕಾಸರಗೋಡು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಸೇರಿದಂತೆ ಪಯಸ್ವಿನಿ ನದಿಯಿಂದ ಕಲ್ಯಾಣಪುರದ ವರೆಗೆ ವ್ಯಾಪಿಸಿದ ವಿಸ್ತಾರವಾದ ಪ್ರದೇಶವು ಪ್ರಾಚೀನ ತುಳುನಾಡು ಆಗಿತ್ತು. ಈ ತುಳುನಾಡಿನ ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕ ಮಹತ್ವವನ್ನು ಈ ಕವನದಲ್ಲಿ ಪೈಗಳು ಪ್ರಸ್ತುತಪಡಿಸಿದ್ದಾರೆ.

ಆರಂಭದಲ್ಲಿ ತೌಳವ ತಾಯಿಗೆ ಜಯವಾಗಲಿ ಎಂದು ಉದ್ಘೋಷಿಸುವ ಕವಿ ಅವಳನ್ನು ತಂದೆ ತಾಯಂದಿರ ತಾಯಿ ಎಂದು ಕರೆಯುವ ಮೂಲಕ ತುಳುನಾಡಿನ ಪ್ರಾಚೀನತೆಯ ಕುರಿತು ಸೂಚಿಸುತ್ತಾರೆ. ಪರಶುರಾಮನ ಕೊಡಲಿಯ ಘಾತಕ್ಕೆ ಗುರಿಯಾದ ಕಡಲು ಅತ್ತ ಸರಿದು ಒಡಮೂಡಿದ ಈ ಪ್ರದೇಶ ಭಾರತಮಾತೆಯ ತೊಡೆಯ ಒಂದು ಭಾಗವೆಂದು ಪೈಗಳು ಹೇಳುತ್ತಾರೆ. ಸ್ವರ್ಗಸದೃಶವಾದ ತುಳುನಾಡಿಗೆ ಸಹ್ಯಾದ್ರಿ ಪರ್ವತಶ್ರೇಣಿಯು ರಕ್ಷಣಾ ಕವಚದಂತಿದೆ. ತೌಳವ ಮಾತೆಯು ಸಹ್ಯಾದ್ರಿಯ ವೀಣೆಯನ್ನು ಮೀಟಿದಾಗ ತುಳುನಾಡಿನಾದ್ಯಂತ ಸೂರ್ಯಚಂದ್ರ ಕಿರಣಗಳು ಪಸರಿಸುತ್ತವೆ; ಮಳೆಮಂಜುಗಳು ಅಕ್ಷತೆಯಂತೆ ಸುರಿಯುತ್ತವೆ. ಹೀಗೆ ಒಂದು ಕಡೆಯಿಂದ ಸಹ್ಯಾದ್ರಿಯ ಬೆಟ್ಟ, ಇನ್ನೊಂದು ಕಡೆಯಿಂದ ಸಮುದ್ರದಿಂದ ಸುತ್ತುವರಿದಿರುವ ತುಳುನಾಡು ಸಹಜ ಋತುಭೇದಗಳಿಂದ ಎಲ್ಲರನ್ನು ಆಕರ್ಷಿಸುತ್ತದೆ.

ಸತಿಯಪುತರಿಗೆ ತುಳುನಾಡು ತವರುಮನೆಯಾಗಿತ್ತು. ಶಾತವಾಹನರ ಸಾಮ್ರಾಜ್ಯದ ದಕ್ಷಿಣದಲ್ಲಿ ತುಳುನಾಡಿದೆ. ತುಳುನಾಡು ಹಿಂದೆ ಅಲೂಪ ಮತ್ತು ಪಾಂಡ್ಯರ ಸಾಮ್ರಾಜ್ಯವಾಗಿತ್ತು. ಕರ್ನಾಟಕದ ಅರಸರಿಗೆ ತುಳುನಾಡು ಎಂದಿಗೂ ನೆರೆಮನೆಯಿದ್ದಂತೆ. ಭೈರವ, ಬಂಗ, ಚೌಟ, ಅಜಿಲ ಮೊದಲಾದ ಸಾಮಂತರಾಜರಿಗೆ ಶಕ್ತಿ ನೀಡಿದವಳು ತೌಳವಮಾತೆ. ತುಳುವರಿಗೆ ಇದು ತಾಯಿಮನೆಯಾದರೆ, ಉಳಿದವರನ್ನು ಕಾಯುವ ನೆಲವಾಗಿತ್ತು. ಆದುದರಿಂದ ತೌಳವಮಾತೆ ತುಳುವರ ಮನೆಮನೆಯ ಶಕ್ತಿಯಾಗಿದ್ದಾಳೆ. 'ದೇಗುಲಗಳೊ ಧರ್ಮದ ಬಾಗಿಲುಗಳೋ? ಕನಸೇ ಕಲ್ಲಾದುವೊ? ನೆಲ ಬಿರಿದೆದ್ದರೆ ಗೊಮ್ಮಟಂ' ಮೊದಲಾದ ಪ್ರಶ್ನೆಗಳ ಮೂಲಕ ಮುಂದುವರಿಯುವ ಕವನ ತುಳುನಾಡಿನ ದೇವಾಲಯ ಸಂಸ್ಕೃತಿ, ಆಚಾರ ಅನುಷ್ಠಾನಗಳು, ಪುಣ್ಯತೀರ್ಥಗಳು, ಶಿಲ್ಪಕಲೆಯ ವೈಭವ, ಪ್ರಕೃತಿ ಸೌಂದರ್ಯ ಮೊದಲಾದ ಅನೇಕ ಸಂಗತಿಗಳನ್ನು ಅನಾವರಣಗೊಳಿಸುತ್ತದೆ.

ತುಳುನಾಡಿನಲ್ಲಿ ಹಿಂದು, ಜೈನ, ಮುಸ್ಲಿಂ, ಕ್ರೈಸ್ತ ಎಲ್ಲ ಸಮುದಾಯದವರು ಬಂಧುಗಳಂತೆ ಪರಸ್ಪರ ಪ್ರೀತಿಯಿಂದ ಬದುಕುತ್ತಿದ್ದಾರೆ. ಜಾತಿ, ಮತ, ಧರ್ಮ ಯಾವುದೇ ಆಗಿರಲಿ, ಲೌಕಿಕ ಬದುಕಿನ ತಂದೆತಾಯಿ ಯಾರೇ ಆಗಿರಲಿ, ಇಲ್ಲಿನ

ಜನರೆಲ್ಲ ತಮಗೆ ತಂದೆ ದೇವರೊಬ್ಬನೆ, ತಾಯಿ ತೌಳವ ಮಾತೆ ಎಂಬ ಪ್ರೀತಿ ವಿಶ್ವಾಸಗಳಿಂದ ಬಾಳುತ್ತಿದ್ದಾರೆ. ಇಂದಿಗೂ ತೌಳವಮಾತೆ ಮಕ್ಕಳಾದ ನಮ್ಮನ್ನು ಅವಳ ಎದೆಯ ತೊಟ್ಟಿಲೊಳಿಟ್ಟು ವಾತ್ಸಲ್ಯದಿಂದ ಕೊಳವು ತಾವರೆಯನ್ನು ಪೋಷಿಸುವಂತೆ ಸಲಹುತ್ತಿದ್ದಾಳೆ ಎಂದು ಪೈಗಳು ಹೇಳುತ್ತಾರೆ. ಕವನದ ಕೊನೆಯ ಭಾಗದಲ್ಲಿ ತುಳುನಾಡಿನಲ್ಲಿ ಹುಟ್ಟಿ ಬಂದಿರುವುದಕ್ಕಾಗಿ ಕವಿ ಅಭಿಮಾನ ತಾಳುತ್ತಾರೆ. ಇನ್ನೊಮ್ಮೆ ಈ ನೆಲದಲ್ಲಿ ಹುಟ್ಟಿ ಬರುವ ಬಯಕೆಯನ್ನು ವ್ಯಕ್ತಪಡಿಸುತ್ತಾರೆ. ತೌಳವಮಾತೆಯ ಬಸುರಿನಲ್ಲಿ ಹುಟ್ಟಿ ಬಂದ ನಾನು ಧನ್ಯ. ನನ್ನ ಜೀವನವೆಂಬ ಹೂವನ್ನು ವ್ಯರ್ಥವಾಗಲು ಬಿಡದೆ, ಅದರ ಪರಿಮಳವನ್ನು ನಿನ್ನ ಪಾದಗಳಿಗೆ ಅರ್ಪಿಸಿಕೊಳ್ಳಬೇಕೆಂದು ಅವರು ಬೇಡಿಕೊಳ್ಳುತ್ತಾರೆ. ಬೀಳ್ಕೊಡುವಂದು ಅಂದರೆ ಮರಣಕಾಲದಲ್ಲಿ 'ಮರಳಿ ಬಾರಾ ಕಂದ ತನ್ನುದರದಿ' ಎಂದು ತನ್ನನ್ನು ಹರಸಬೇಕೆಂದು ಕವಿ ಎದೆ ತುಂಬಿ ಬೇಡಿಕೊಳ್ಳುತ್ತಾರೆ.

ಒಟ್ಟಾರೆಯಾಗಿ ಗೋವಿಂದ ಪೈಗಳ ಅನೇಕ ಕವಿತೆಗಳಲ್ಲಿ ದಟ್ಟವಾದ ರಾಷ್ಟ್ರೀಯ ಪ್ರಜ್ಞೆಯನ್ನು ಗುರುತಿಸಿಕೊಳ್ಳಬಹುದು. ನವೋದಯ ಪೂರ್ವ ಮತ್ತು ನವೋದಯ ಕಾಲಘಟ್ಟದ ಬಹುಮುಖ್ಯ ಅಂಶಗಳಾದ ದೇಶಭಕ್ತಿ, ಸ್ವಾತಂತ್ರ್ಯಪ್ರಿಯತೆ, ಸಂಸ್ಕೃತಿಪ್ರೇಮ. ನಾಡುನುಡಿಗಳ ಕುರಿತ ಅಭಿಮಾನ ಇತ್ಯಾದಿ ಅಂಶಗಳು ಪೈಗಳ ಕವಿತೆಗಳಲ್ಲಿ ಢಾಳಾಗಿ ಕಾಣಿಸಿಕೊಂಡಿವೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬದುಕಿದ ಕವಿ ಸಂವೇದನಾಶೀಲ ರಾಷ್ಟ್ರೀಯ ಪ್ರಜ್ಞೆಯನ್ನು ಪ್ರಕಟಿಸಿರುವುದು ಕಂಡುಬರುತ್ತದೆ. ರಾಷ್ಟ್ರಕ್ಕಾಗಿ ಹೋರಾಡಿದ ಮಹಾತ್ಮರ ಪ್ರಭಾವ ಅವರ ಕವಿತೆಗಳಲ್ಲಿ ಕಾಣಿಸಿಕೊಂಡಿದೆ. ನಾಡುನುಡಿಗಳ ಅಭಿಮಾನದ ಪ್ರತಿಕ್ರಿಯೆಯಾಗಿ ಕನ್ನಡನಾಡು ಮತ್ತು ಭಾಷೆಯನ್ನು ವರ್ಣಿಸಿದ್ದಾರೆ. ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಗಳನ್ನು ಕವಿತೆಗಳಲ್ಲಿ ವರ್ಣಿಸುವ ಮೂಲಕ ಕನ್ನಡ ಕವಿಗಳ ರಾಷ್ಟ್ರೀಯ ಪ್ರಜ್ಞೆಗೆ ಹೊಸ ಆಯಾಮವನ್ನು ನೀಡಿದ್ದಾರೆ.

## ಪರಾಮರ್ಶನ ಗ್ರಂಥಗಳು


೧. ಸದಾಶಿವ.ಬಿ, ಗೋವಿಂದ ಪೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೨. ಸಂತೋಷ ಚೊಕ್ಕಾಡಿ(ಡಾ.), ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು, ಕರ್ನಾಟಕ ಸಂಘ, ಪುತ್ತೂರು, ೨೦೦೨.

೩. ಶಿವಾಜಿ ಜೋಯಿಸ್.ಎಸ್(ಸಂ.), ಗೋವಿಂದ ಪೈ ಸಮಗ್ರ ಕವಿತೆಗಳು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ ಮತ್ತು ಕಾವ್ಯಾಲಯ ಪ್ರಕಾಶಕರು, ಮೈಸೂರು, ೨೦೦೮.